ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೨೬ ಮೇ ೨೦೨೩ ಸಂಚಿಕೆ ೩



"ಓರ್ವ ಮನುಷ್ಯನಾಗಿ ನೀವು ಮಾನಸಿಕವಾಗಿ ಆಮೂಲಾಗ್ರ ಬದಲಾದರೆ ಅಂದರೆ ಭಯದಿಂದ ಮುಕ್ತರಾದರೆ, ಪರಸ್ಪರ ಸರಿಯಾದ ಸಂಬಂಧ ಸ್ಥಾಪಿಸಿಕೊಂಡರೆ, ದುಃಖವನ್ನು ಕೊನೆಗೊಳಿಸಿದರೆ ಆಗ ಆಮೂಲಾಗ್ರ ಪರಿವರ್ತನೆ ಸಾಧ್ಯ; ಆಗ ನೀವು ಅಖಂಡ ಮನುಕುಲದ ಪ್ರಜ್ಞೆಯ ಮೇಲೆ ಪ್ರಭಾವ ಬೀರುತ್ತೀರಿ. ಇದು ವೈಯಕ್ತಿಕ ವ್ಯವಹಾರವಲ್ಲ ಇದು ಸ್ವಾರ್ಥದ ವ್ಯವಹಾರವೂ ಅಲ್ಲ. ಇದು ವೈಯಕ್ತಿಕ ಮುಕ್ತಿಯೂ ಅಲ್ಲ, ನೀವೂ ಸೇರಿದಂತೆ ಎಲ್ಲ ಮಾನವರ ಮುಕ್ತಿ".

ಜೆ ಕೃಷ್ಣಮೂರ್ತಿ

ಜನನ: ಮೇ 11, 1895.

ಕಡಲ ಒಡಲಿನಲಿ ಕೃಷ್ಣಮೂರ್ತಿ

ಒಂದು ದಿನ ತನ್ನ ಯುವಕ ಸ್ನೇಹಿತರ ಜೊತೆ ಆಡ್ಯಾರಿನ ಕಡಲಿಗೆ ಸ್ನಾನಕ್ಕೆ ಹೋಗಿದ್ದ ಲೆಡ್ ಬೀಟರ್, ಕಡಲ ತೀರದಲ್ಲಿ ಆಡುತ್ತಿದ್ದ ಕೃಷ್ಣಮೂರ್ತಿ ಮತ್ತು ನಿತ್ಯರನ್ನು ಕಂಡರು. ಸಮುದ್ರ ಸ್ನಾನದಿಂದ ಹಿಂದಿರುಗಿದ ಲೆಡ್ ಬೀಟರ್, ಸ್ವಾರ್ಥದ ಲವಲೇಶವೂ ಇಲ್ಲದ, ಅತ್ಯಂತ ತೇಜಸ್ವೀ ಪ್ರಭಾವಲಯವಿರುವ ಒಬ್ಬ ವಿಶಿಷ್ಟ ಬಾಲಕನನ್ನು ಅಂದು ತಾನು ಸಮುದ್ರ ದಂಡೆಯಲ್ಲಿ ಕಂಡುದನ್ನು ಅರ್ನೆಸ್ಟ್ ವುಡ್‌ರಿಗೆ ವಿವರಿಸಿದರು. ವುಡ್‌ರವರಿಗೆ, ತಾನು ಪಾಠ ಹೇಳಿಕೊಡುತ್ತಿದ್ದಾಗ ತನ್ನ ಗಮನಕ್ಕೆ ಬಂದ ಜಿಡ್ಡು ತಲೆಯ ಕೃಷ್ಣಮೂರ್ತಿಯೇ ಬಾಲಕ ಎಂದು ಗೊತ್ತಾದ್ದಾಗ ನಿಜಕ್ಕೂ ಆಶ್ಚರ್ಯವಾಯಿತು. ತನ್ನನ್ನು ಆಕರ್ಷಿಸಿದ ಬಾಲಕ ಕೃಷ್ಣನನ್ನು ಹಲವು ದಿನಗಳವರೆಗೆ ಸೂಕ್ಷ್ಮವಾಗಿ ಗಮನಿಸುತ್ತಾ ಬಂದ ಲೆಡ್ ಬೀಟರ್, 'ಈತ ಮುಂದೊಂದು ದಿನ ವಿಶ್ವಗುರುವಾಗಲಿರುವನೆಂದೂ, ಜೊತೆಗೆ ಉತ್ತಮ "ಆನಿಬೆಸೆಂಟ್‌ರಿಗೆ ಭಾಷಣಕಾರನಾಗಲಿರುವನೆಂದೂ ಭವಿಷ್ಯ ನುಡಿದರು. ಸರಿಸಾಟಿಯಾಗಬಹುದೇ ಈ ಹುಡುಗ?" ಎಂದು ವುಡ್ ಕೇಳಿದಾಗ, ಆಕೆಗಿಂತಲೂ ದೊಡ್ಡ ವ್ಯಕ್ತಿಯಾಗುತ್ತಾನೆ' ಎಂದು ಉತ್ತರಿಸಿದರು. ಮಾತ್ರವಲ್ಲ, "ಈ ಬಾಲಕನಲ್ಲಿ, ಮೈತ್ರೇಯ ದೇವ ಅವತಾರ ತಾಳಲಿದ್ದಾನೆ" ಎಂದು ಸಾರುತ್ತಾ "ಅದಕ್ಕಾಗಿ ಆತನನ್ನು ಸಜ್ಜುಗೊಳಿಸಿ ತರಬೇತುಗೊಳಿಸುವ ಜವಾಬ್ದಾರಿ ನನ್ನದು ಎಂದು ದಿವ್ಯಲೋಕದ ಆದೇಶವಾಗಿದೆ' ಎಂದು ಹೇಳಿಕೊಂಡರು. ಆ ಸಮಯದಲ್ಲಿ ಯುರೋಪಿನಲ್ಲಿ ಪ್ರವಾಸ ಮಾಡುತ್ತಿದ್ದ ಆನಿಬೆಸೆಂಟ್‌ರಿಗೂ, ನಾರಣಯ್ಯ ಮತ್ತು ಸನ್ನಡತೆಯ ಅವರ ಮಕ್ಕಳ ಬಗ್ಗೆ ಪತ್ರ ಬರೆಯುತ್ತಾ ಲೆಡ್ ಬೀಟರ್, "ಕೃಷ್ಣನ ಜನ್ಮಾಂತರವನ್ನು ಶೋಧಿಸಿದಾಗ ಭವಿಷ್ಯದಲ್ಲಿ ಆತ ಅಧ್ಯಾತ್ಮಪಥದಲ್ಲಿ ಬಹಳ ಮುಂದುವರಿದ ವ್ಯಕ್ತಿಯಾಗುತ್ತಾನೆ ಥಿಯೋಸಾಫಿಕಲ್ ಸೊಸೈಟಿಯ ದೀಕ್ಷಾಪಥದ ವಿಭಿನ್ನ ಕಕ್ಷೆಗಳಲ್ಲಿರುವ ಇತರರೆಲ್ಲರಿಗಿಂತ, ಮಾತ್ರವಲ್ಲ ಈ ಹಿಂದೆಯೇ ವಿಶ್ವಗುರು ಸ್ಥಾನಕ್ಕಾಗಿ ಗುರುತಿಸಲ್ಪಟ್ಟು ಈಗಾಗಲೇ ತರಬೇತಿ ಪಡೆಯುತ್ತಿರುವ ಅಮೇರಿಕಾದ ಹುಡುಗ ಕ್ಯೂಬರ್ಟ್‌ಗಿಂತಲೂ ಮುಂದುವರಿಯುತ್ತಾನೆ ಎಂದೂ ತಿಳಿಸಿದರು. ಆದರೆ, ಲೆಡ್ ಬೀಟರ್‌ರ ಗಮನ ಸೆಳೆದ ಕೃಷ್ಣನ ಬಾಹ್ಯ ವ್ಯಕ್ತಿತ್ವ ಅಷ್ಟೇನೂ ಗಮನ ಸೆಳೆಯುವಂತಿರಲಿಲ್ಲ. ಬಡತನ, ಹಸಿವೆ, ಕೊಳೆ ತುಂಬಿದ, ಬಡಕಲು ದೇಹದ, ಸೊಟ್ಟ ಹಲ್ಲಿನ, ಉದ್ದ ಜುಟ್ಟಿನ, ಭೋಳೆ ದೃಷ್ಟಿಯ ದಡ್ಡನಂತೆ ತೋರುವ ಕೃಷ್ಣ, ಶಾಲೆಗೂ ಹೋಗಲಾರದಂಥ ದೈಹಿಕ ಹಾಗೂ ಮಾನಸಿಕ ಅನಾರೋಗ್ಯ ಸ್ಥಿತಿಯಲ್ಲಿದ್ದ. ಆದರೆ, ಆತನ ಕಣ್ಣುಗಳು ಮಾತ್ರ ತೇಜಸ್ಸಿನಿಂದ ಹೊಳೆಯುತ್ತಿದ್ದವು.

ಕೃತಿ : ಜೆ ಕೃಷ್ಣಮೂರ್ತಿ ಜೀವನ ದರ್ಶನ (ಅಧ್ಯಾಯ ೧)
ಲೇಖಕರು : ನಿ. ಮುರಾರಿ ಬಲ್ಲಾಳ



ವ್ಯವಸ್ಥೆ ಎಂಬುದು ಧೀಶಕ್ತಿಯ ಉನ್ನತ ರೂಪ ಧೀಶಕ್ತಿ ಎಂದರೆ ಜಾಣ್ಮೆಯಲ್ಲ . ಅಭಿಪ್ರಾಯಗಳನ್ನು ತೀರ್ಮಾನಗಳನ್ನು ವಿರೋಧಿಸುವುದೆಂದಲ್ಲ; ಅದು ಕೇವಲ ತಾರ್ಕಿಕ ಸಾಮರ್ಥ್ಯವಲ್ಲಧೀಶಕ್ತಿ ಎಂಬುದು ತನ್ನ ಬಗ್ಗೆ ಹಾಗೂ ಅನ್ಯರ ಬಗ್ಗೆ ಅಂತರಂಗ ಬಹಿರಂಗಗಳೆರಡರಲ್ಲೂ ಕಂಡುಬರುವ ಸಂವೇದನಾಶೀಲತೆ.

ಜೆ ಕೃಷ್ಣಮೂರ್ತಿ

ಆಂತರಿಕ ಪರಿವರ್ತನೆ

ಕೃಷ್ಣಮೂರ್ತಿಯು ಆಂತರಿಕವಾಗಿ ಪರಿವರ್ತನೆಯಾಗುತ್ತಿದ್ದ ಕಾಲವದು. ೧೯೨೦ರಷ್ಟು ಹೊತ್ತಿಗೆ ಆತ ಥಿಯೋಸಫಿಯ ತತ್ತ್ವಗಳ ಅನುಷ್ಠಾನದಲ್ಲಿ ಮನುಷ್ಯನ ಎಲ್ಲಾ ಸಮಸ್ಯೆಗಳಿಗೆ ಉತ್ತರವಿದೆ ಎಂಬ ಬಗ್ಗೆ ನಂಬಿಕೆ ಕಳೆದುಕೊಳ್ಳಲು ತೊಡಗಿದ್ದ. ವಿಶ್ವಗುರುವಿನ ಪಟ್ಟಕ್ಕಾಗಿ ಒಂದು ದಶಕದ ಕಾಲ ನಾನಾತರದ ತರಬೇತಿಗಳಿಗೆ ಒಳಪಟ್ಟ ಕೃಷ್ಣ ಕೊನೆಯಲ್ಲಿ, ಈ ಗೋಪ್ಯ ದೀಕ್ಷಾ ಸಂಘ (esoteric section) ಮತ್ತು ಅತೀಂದ್ರಿಯ ಶಕ್ತಿಗಳು ಮನುಷ್ಯನ ತೀವ್ರ ಆಂತರಿಕ ಬಿಕ್ಕಟ್ಟು, ದುಃಖಗಳನ್ನು ಉಪಶಮನಗೊಳಿಸಬಲ್ಲುದೆಂಬ ಸಿದ್ಧಾಂತವನ್ನೆ ಅನುಮಾನಿಸತೊಡಗಿದ್ದ. ಒಂದು ಕಡೆ ತನ್ನ ನೆಲದ ದೇಸೀ ತಿಳುವಳಿಕೆ-ಪರಂಪರೆಗಳಿಗೆ ಪರಕೀಯನಾದ; ಇನ್ನೊಂದೆಡೆ, ಇದಕ್ಕೆ ಬದಲಿಯಾಗಿ ಪಡೆದ ಪಶ್ಚಿಮದ ತರಬೇತಿಗೆ ಹೊರಗಿನವನಾಗಿಯೇ ಉಳಿದ. ಈ ದ್ವಂದ್ವದಿಂದ ಹೊರಬರಲಾರದ ಅಸಹಾಯಕ ಸ್ಥಿತಿಯಲ್ಲಿ ಇದ್ದ ಕೃಷ್ಣ, ಬೇಗುದಿಯಿಂದ ತನ್ನನ್ನು ಮಗುವಿನಂತೆ ಇನ್ನೂ ನಡೆಸಿಕೊಳ್ಳುವುದನ್ನು

ಸೂಕ್ಷ್ಮವಾಗಿ ವಿರೋಧಿಸಿ ಲೆಡ್ ಬೀಟರ್‌ಗೆ ಪತ್ರ ಬರೆದು, "ನನ್ನ ಬದುಕನ್ನು ನಾನೇ ರೂಪಿಸಿಕೊಳ್ಳಲು ಅವಕಾಶ ನೀಡದಿರುವುದು ಸರಿಯಲ್ಲ. ನನ್ನ ಬದುಕಿನ ಜವಾಬ್ದಾರಿಯನ್ನು ನಾನೇ ನಿರ್ವಹಿಸುವ ಕಾಲ ಬಂದಿದೆ' ಎಂದು ತನ್ನ ಖಚಿತ ಅಭಿಪ್ರಾಯವನ್ನು ವ್ಯಕ್ತಪಡಿಸಿದ.

ಆತ ಇಂಗ್ಲೆಂಡಿಗೆ ಹೋಗಿ ಹತ್ತು ವರ್ಷಗಳ ಬಳಿಕ, ೧೯೨೧ರಲ್ಲಿ, ಆಸ್ಟ್ರೇಲಿಯಾದಲ್ಲಿ ನಡೆದ ಥಿಯೋಸಫಿಸ್ಟರ ಸಮ್ಮೇಳನಕ್ಕೆ ಹೋಗುವ ದಾರಿಯಲ್ಲಿ ಕೃಷ್ಣಮೂರ್ತಿ, ಮೊದಲಬಾರಿ ಭಾರತಕ್ಕೆ ಬಂದು ಕೆಲವು ದಿನ ಇದ್ದು ಹೋದ. ನಿತ್ಯಾನಂದನ ಆರೋಗ್ಯ ಆಗಲೇ ಕೆಡಲು ಆರಂಭವಾಗಿತ್ತು. ಕ್ಷಯರೋಗದಿಂದ ಬಳಲುತ್ತಿದ್ದ. ತಜ್ಞವೈದ್ಯರಿಗೆ ತೋರಿಸಿದಾಗ ಅವರು ವಾತಾವರಣ ಬದಲಾವಣೆ ಮಾಡುವಂತೆ ಸಲಹೆ ನೀಡಿದರು. ಅವರ ಮಾರ್ಗದರ್ಶನದಂತೆ ಕೃಷ್ಣಮೂರ್ತಿ ಮತ್ತು ನಿತ್ಯಾನಂದರು ೧೯೨೨ರಲ್ಲಿ ಕ್ಯಾಲಿಫೋರ್ನಿಯಾದ ಗುಡ್ಡ ಕೊಳ್ಳಗಳ ಸುಂದರ ನಾಡಾದ ಒಣಹವೆಯ ಓಹಾಯಿಗೆ ತೆರಳಿದರು. ಕಡಲ ಪ್ರಯಾಣದ ಮಧ್ಯದಲ್ಲೇ ನಿತ್ಯ ತೀವ್ರ ಅಸ್ವಸ್ಥನಾದ. ಅಂತೂ ಇಬ್ಬರೂ ಓಹಾಯಿ ತಲುಪಿದರು.

ಬೆಟ್ಟಗಳ ಸಾಲುಗಳಿಂದ, ಹಸುರಿನ ಚೆಲುವಿನಿಂದ, ಕಂಗೊಳಿಸುತ್ತಿದ್ದ ಆ ಪ್ರಶಾಂತ ಪ್ರದೇಶವಾದ ಓಹಾಯಿಯ ಕಣಿವೆ ಕುಟೀರದಲ್ಲಿ ನಿತ್ಯ ಕೃಷ್ಣರು ನೆಲೆಸಿದರು. ಅಲ್ಲಿ ಕಳೆದ ದಿನಗಳು ಕೃಷ್ಣನ ಜೀವನದ ಅತ್ಯಂತ ಪ್ರಶಸ್ತ ದಿನಗಳೆನ್ನಬಹುದು. ಕೃಷ್ಣನ ಒಟ್ಟು ದೃಷ್ಟಿಯೇ ಮಾಗುತ್ತಿದ್ದ ಕಾಲವದು. ಸತತ ತರಬೇತಿಯ ಹೊರಲೋಕದಿಂದ ಆತ ಮೌನದ ಒಳಲೋಕಕ್ಕೆ ಹೊರಳಿದ. ನಿತ್ಯವೂ ಕುಟೀರದ ಹೊರಗಿರುವ ಒಂದು ಹೆಮ್ಮರದ ಬುಡದಲ್ಲಿ ಕುಳಿತು ಅಂತರ್ಮುಖಿಯಾಗಿ, ಮನುಷ್ಯ ಅನುಭವಿಸುವ ಎಲ್ಲ ಸುಖಗಳ ಆಚೆನ ಆನಂದಾನುಭವದಲ್ಲಿ ಮುಳುಗಿಬಿಡುತ್ತಿದ್ದ. ಆತನ ಆಂತರ್ಯದಲ್ಲಿದ್ದ ದ್ವಂದ್ವಗಳು ಕ್ರಮೇಣ ಕರಗಲು ಆರಂಭವಾದಂತೆ, ಆತ ಖಚಿತವಾಗುತ್ತ ಮುನ್ನಡೆಯಲು ಆರಂಭಿಸಿದ. ಈ ಬಗ್ಗೆ ತನ್ನ ಗೆಳೆಯನಿಗೆ ಬರೆದ ಪತ್ರದಲ್ಲಿ, 'ನನಗೆ ನನ್ನ ಬದುಕಿನ ದರ್ಶನಾನುಭವ ಇಲ್ಲ; ಹಾಗಾಗಿ, ನನಗಿನ್ನೂ ಅದು ಏನೆಂದು ತಿಳಿಯದು. ಆದರೆ, ನನಗೆ ನನ್ನದೇ ಆದ ತತ್ತ್ವದರ್ಶನವೊಂದಿದೆ ಎಂಬುದಂತೂ ಖಚಿತ. ಅದನ್ನು ನಾನೇ ಕಂಡುಕೊಳ್ಳಬೇಕು. ಆ ಮೇಲೆ ಮಾತ್ರ ನಾನು ಇನ್ನೊಬ್ಬನಿಗೆ ಸಹಾಯ ಮಾಡಲು ಸಾಧ್ಯ' ಎಂದು ಹೇಳಿಕೊಂಡಿದ್ದ. ಮುಂದೆ ಬಹಳ ದೀರ್ಘಕಾಲದ ಬಳಿಕ ತನ್ನ ಸ್ವಂತ ಜೀವನಾನುಭವದಿಂದ ಆಡಿದ ಮಾತುಗಳು ನಿಜಕ್ಕೂ ಉಲ್ಲೇಖನೀಯ: "ಬದುಕೆಂಬುದೊಂದು ನಿಗೂಢ ಅನುಭಾವ (mystery). ಅಲ್ಲಿ ನಮ್ಮ ಸ್ಥಾನ ಏನು ಎಂಬುದನ್ನು ಹೊಸತಾಗಿ, 'ಫ್ರೆಶ್' ಆಗಿ ನಾವು ನಾವೇ ಶೋಧಿಸಿಕೊಳ್ಳಬೇಕು. ಅದೇ 'ಸ್ವಯಂ ಜೀವನ ದರ್ಶನ."

ಕೃತಿ : ಜೆ ಕೃಷ್ಣಮೂರ್ತಿ ಜೀವನ ದರ್ಶನ (ಅಧ್ಯಾಯ ೧)
ಲೇಖಕರು : ನಿ. ಮುರಾರಿ ಬಲ್ಲಾಳ



ಹಲವಾರು ಶತಮಾನಗಳ ಕಾಲ ರೂಪುಗೊಂಡ ಭ್ರಮೆಯ ರೂಢಿ ಹಾಗೂ ವಿಕಾಸ, ಪ್ರಜ್ಞೆಯ ಒಟ್ಟು ವಸ್ತುವೇ ಮನಸ್ಸು. ಅದು ಭೂತ ಹಾಗೂ ಮೃತ ಸಂಗತಿಗಳೆಲ್ಲದರ ಸ್ಮೃತಿ. ನಾವು ಸ್ಮೃತಿಗೆ ವಿಶೇಷವಾದ ಮಹತ್ವ ನೀಡುತ್ತೇವೆ. ಮನಸ್ಸು ಎಂದರೆ ಸ್ಮೃತಿ. ಎಲ್ಲ ಸಂಪ್ರದಾಯಗಳೂ ಭೂತವೇ. ನಾವು ಅದಕ್ಕೆ ಜೋತುಬಿದ್ದು ಅದರ ಬಗ್ಗೆ ಎಲ್ಲ ತಿಳಿಯಲು ಪ್ರಯತ್ನಿಸಿ ಹಾಗೆ ಕಲಿಯಲು ಸಮಯಬೇಕು ಎಂದು ಭಾವಿಸುತ್ತೇವೆ.

ಜೆ ಕೃಷ್ಣಮೂರ್ತಿ

ಆಂತರಿಕ ತುಮುಲ

ಥಿಯೋಸಾಫಿಕಲ್ ಸೊಸೈಟಿಯ ಸಮಾವೇಶಗಳು, 'ಆರ್ಡರ್ ಆಫ್ ದಿ ಸ್ಟಾರ್' ನ ವಾರ್ಷಿಕ ಶಿಬಿರಗಳು ನಡೆಯುತ್ತಲೇ ಇದ್ದುವು. ಅದರಲ್ಲೆಲ್ಲ ಕೃಷ್ಣಮೂರ್ತಿ ಭಾಗವಹಿಸಿ ಮಾತಾಡಬೇಕಿತ್ತು. ಅಂಥ ಸಂದರ್ಭಗಳಲ್ಲೆಲ್ಲ ಅನ್ನಿಬಿಸೆಂಟ್, ಲೆಡ್‌ಬೀಟರ್ ಮೊದಲಾದವರು, ಶೀಘ್ರವೇ ಪ್ರವಾದಿಯ ಅವತಾರವಾಗಲಿಕ್ಕಿದೆ, ಕೃಷ್ಣನಲ್ಲಿ ಪ್ರವಾದಿಯ ಲಕ್ಷಣಗಳು ಪ್ರಕಟಗೊಳ್ಳುತ್ತಿವೆ, ಎಂದೆಲ್ಲ ಹೇಳಿಕೆ ನೀಡುತ್ತಿದ್ದರು. ಆದರೆ ದಿನಗಳೆದಂತೆ ಕೃಷ್ಣನಿಗೆ ಜಗದ್ಗುರುವಿನ ಪಟ್ಟ ಮುಳ್ಳಿನ ಹಾಸಿಗೆಯಂತೆ ಭಾಸವಾಗುತ್ತಿತ್ತು. ಹೊಸಧರ್ಮ ಸ್ಥಾಪನೆಯ ಗುರುವಿನ ಆಗಮನವನ್ನು ಜನರು ಕಾತರದಿಂದ ಎದುರುನೋಡುತ್ತಿದ್ದರು. ಆದರೆ ಕೃಷ್ಣಮೂರ್ತಿಯ ಮನಸ್ಸು ಈ ಬಗ್ಗೆ ತಳಮಳಿಸುತ್ತಿತ್ತು. ಜನರು ಬಯಸಿದ ಗುರೂಪದೇಶ, ಮಾರ್ಗದರ್ಶನ ಮುಂತಾದವು ತನ್ನಿಂದಾಗದ ಕೆಲಸ, ಈ ಭೂಮಿಯಲ್ಲಿದ್ದಷ್ಟು ದಿನ ದೈನಂದಿನ ಬದುಕಿನ ಕಾಳಜಿಗಳ ಬಗ್ಗೆ ಹೆಚ್ಚು ಗಮನಕೊಡುವುದು ಮುಖ್ಯ ಎಂದು ಆತ ಮನಗಾಣಲು ತೊಡಗಿದ್ದ. "ಬದುಕಿನ ನಿಗೂಢತೆಗೆಲ್ಲ ಉತ್ತರಕ್ಕಾಗಿ ತಡಕಾಡುವುದಕ್ಕಿಂತ,

ಪ್ರಶ್ನೆಗಳ ಅಲೆಗಳನ್ನೆಬ್ಬಿಸುವುದು ಬಹಳ ಮುಖ್ಯ. ಅನುಮಾನವು ಅತ್ಯಂತ ಅಮೂಲ್ಯವಾದುದು. ಅನುಮಾನ ಮತ್ತು ಪ್ರಶ್ನಿಸುವಿಕೆಗಳು ಆಧ್ಯಾತ್ಮ ಶೋಧನೆಯ ಸರಿಕ್ರಮಗಳು. ಅವು ನಮ್ಮ ಮನಸ್ಸನ್ನು ಶುದ್ಧೀಕರಿಸಿ, ಸತ್ಯಾನ್ವೇಷಣೆಯ ಪಥವನ್ನು ಸ್ವಚ್ಛಗೊಳಿಸುತ್ತದೆ ಎಂದು ಪ್ರತಿಪಾದಿಸಲು ಆರಂಭಿಸಿದ.

೧೯೨೬ರಲ್ಲಿ ಓಮೆನ್‌ಗೆ ಹೋದ ಸಂದರ್ಭದಲ್ಲಿ ಮಾತಾಡುತ್ತಾ ಕೃಷ್ಣ, 'ಕಳೆದ ಹದಿನೈದು ದಿನಗಳಲ್ಲಿ ನಾನು ಎಷ್ಟು ಬದಲಾಗಿದ್ದೇನೆಂದರೆ, ನನ್ನ ದೇಹದ ಒಳಹೊರಗಳು, ಮುಖ-ಕೈಕಾಲುಗಳು, ನನ್ನ ಸಮಗ್ರ ಅಸ್ತಿತ್ವವೇ ಸಂಪೂರ್ಣ ಬದಲಾಗಿದೆ. ನಿರಂತರ ಬದಲಾವಣೆ, ಮಾನಸಿಕ ತುಮುಲ, ಆಂತರಿಕ ಕೋಭೆಗಳಲ್ಲಿ ಮಾತ್ರ ಮನುಷ್ಯ ಕ್ಷಣಕ್ಷಣವೂ ಹೊಸತನ್ನು ಉಸಿರಾಡಲು ಸಾಧ್ಯ, ನಿತ್ಯ ನೂತನವಾಗಿರಲು ಸಾಧ್ಯ." ಎಂದು ಅಭಿಪ್ರಾಯ ಪಟ್ಟ. ೧೯೨೭ರಲ್ಲಿ ಓಮನ್‌ನಲ್ಲಿ ನಡೆದ 'ಸ್ಟಾರ್" ಕ್ಯಾಂಪಿನ ಸಂದರ್ಭದಲ್ಲಿ ಆತ ಥಿಯೋಸಾಫಿಕಲ್ ಸೊಸೈಟಿಯ ತತ್ವ-ನಂಬಿಕೆಗಳಿಗೆ ತದ್ವಿರುದ್ಧವಾಗಿ ಮಾತಾಡಲು ತೊಡಗಿದ. ೧೯೨೮ರಲ್ಲಿ ಹಾಲೆಂಡ್‌ನಲ್ಲಿ ತನ್ನ ಗೆಳೆಯರ ಜೊತೆಗೆ 'ಆರ್ಡರ್ ಆಫ್ ದಿ ಸ್ಟಾರ್" ಸಂಘಟನೆಯನ್ನು ವಿಸರ್ಜಿಸುವ ಕುರಿತು ಚರ್ಚಿಸಿದ. ಅದೇ ವರ್ಷ ಓಮೆನ್‌ನಲ್ಲಿ ನಡೆದ ಶಿಬಿರದಲ್ಲಿ, 'ಜಗತ್ತಿನಲ್ಲಿ ಎಲ್ಲ ನಿಯಂತ್ರಣಾಧಿಕಾರ, ಪ್ರಭುತ್ವಗಳನ್ನು, ಗುರುವಿನ ಆಗಮನದಲ್ಲಿ ನಂಬಿಕೆಯನ್ನೂ ನಿರಾಕರಿಸಿ, ನಮ್ಮ ಒಳಬೆಳಕಿನಿಂದಲೇ ನಮ್ಮನ್ನು ನಾವು ಕಂಡುಕೊಳ್ಳಬೇಕು' ಎಂದ. "ಬುದ್ಧ, ಏಸು ಕ್ರಿಸ್ತರು ತಾವು ಎಂದೂ ದೈವಸ್ವರೂಪರೆಂದು ಹೇಳಿಕೊಳ್ಳಲಿಲ್ಲ. ಆದರೆ ಅವರ ಶಿಷ್ಯರು ದೈವತ್ವವನ್ನು ಅವರ ಮೇಲೆ ಆರೋಪಿಸಿದರು" ಎಂದು ಹೇಳಿದ.

ಥಿಯೋಸಾಫಿಕಲ್ ಸೊಸೈಟಿ ಮತ್ತು ಕೃಷ್ಣರ ನಡುವಿನ ಬಿರುಕು ಸಂಪೂರ್ಣ ಬಯಲಾಗುತ್ತಿದ್ದ ಕಾಲ ಅದು. ೧೯೨೬-೨೭ರ ಈ ಅವಧಿಯಲ್ಲಿ ಆನಿಬೆಸೆಂಟ್ ತನ್ನೆಲ್ಲ ಕೆಲಸಕಾರ್ಯಗಳನ್ನು ಬದಿಗಿಟ್ಟು ಕೃಷ್ಣನ ಜೊತೆಗಿರಲು ಓಹಾಯ್‌ಗೆ ಬಂದು ನೆಲೆಸಿದರು. ಕೃಷ್ಣಮೂರ್ತಿಯ ಆಂತರಿಕ ಪರಿವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸುತ್ತ, ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ತನ್ನ ನಂಬಿಕೆಗೆ ತೀರ ವಿರುದ್ಧವಾಗಿ ಕೃಷ್ಣ ನಡೆದುಕೊಳ್ಳುತ್ತಿದ್ದುದನ್ನು ಕಂಡು ಮೂಕವೇದನೆಯನ್ನು ಅನುಭವಿಸುತ್ತಿದ್ದರು. ಆದರೂ, ಆತನ ಮೇಲಿನ ಅಗಾಧ ಪ್ರೀತಿಯಿಂದ ಆತನಿಗೆ ನಂಬಿಕೆಯಿಲ್ಲದ ಸೊಸೈಟಿಯ ಗೂಢ ದೀಕ್ಷಾಸಂಘದ ಕಾರ್ಯಚಟುವಟಿಕೆಗಳನ್ನು ಸ್ಥಗಿತಗೊಳಿಸಿದರು. ಆದರೆ, ಕೆಲವೇ ತಿಂಗಳಲ್ಲಿ ಸೊಸೈಟಿಯ ಸದಸ್ಯರ ಒತ್ತಾಯಕ್ಕೆ ಮಣಿದು ದೀಕ್ಷಾ ಸಂಘವನ್ನು ಪುನಃ ಆರಂಭಿಸಬೇಕಾಯಿತು. ಆದರೆ, ತಾನು ಮಾತ್ರ ಸೊಸೈಟಿಯ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಕೊಟ್ಟು, ಕೃಷ್ಣಮೂರ್ತಿಯ ಕಾಲ ಬುಡದಲ್ಲಿ ತನ್ನ ಮುಂದಿನ

> ಧ್ಯಾನದಲ್ಲಿ ತಿಳಿದುಕೊಳ್ಳುವಿಕೆಯಿಲ್ಲ, ಗುರುತಿಸುವಿಕೆಯಿಲ್ಲ. ಆಗಿಹೋದ ಯಾವುದೇ ಘಟನೆಗಳ ನೆನಪೇ ಇಲ್ಲ.
>
> **ಜೆ ಕೃಷ್ಣಮೂರ್ತಿ**

ಜೀವನ ಕಳೆಯುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಆದರೆ, ಕೃಷ್ಣಮೂರ್ತಿ, ಅದಕ್ಕೆ ಸಮ್ಮತಿಸಲಿಲ್ಲ.

ಕೃತಿ : ಜೆ ಕೃಷ್ಣಮೂರ್ತಿ ಜೀವನ ದರ್ಶನ
ಲೇಖಕರು : ನಿ. ಮುರಾರಿ ಬಲ್ಲಾಳ





Study Retreat 2023: JUN-SEP

- June 15-18: Harmony in Relationships
  (3-Day weekend program - Thurs 7.30 pm-Sun 5 pm)
- July 7-9 : What does it mean to be a 'Responsible Parent'?
  (2-Day weekend program - Fri 7.30pm - Sun 5.30pm)
- Aug 18-20 : What is 'Holistic Education'?
  (2-Day weekend program - Fri 7.30pm - Sun 5.30pm)
- Sept 7-10 : Understanding 'Emotions' - Hurt, Frustration & Anger
  (3-Day weekend program-Thurs 7.30 pm - Sun 5 pm)

ಅಲ್ಲಿ ಕಲಿಯುವಂಥದ್ದೇನೂ ಇಲ್ಲ; ಇರುವುದು ವಿಶಾಲವಾದ ಅವಕಾಶ.

ಸ್ಮೃತಿ, ಜ್ಞಾನ, ನೆನಪುಗಳು ಹಾಗೂ ಅನುಭವಗಳಿಗೂ ಏನು ಸಂಬಂಧ? ಇವೆರಡರ ನಡುವಿನ ಸಂಬಂಧವೇನು? ನಾವು ಆಗಾಗ್ಗೆ ಹೇಳಿದಂತೆ ಜ್ಞಾನ ಹಾಗೂ ಚಿಂತನ ಎರಡೂ ಸೀಮಿತ. ಮಿತವಾದುದು ಅಸೀಮದ ಜತೆ ಪ್ರಾಯಃ ಯಾವ ಸಂಬಂಧವನ್ನೂ ಹೊಂದಲಾರದು; ಆದರೆ ಅಸೀಮವು ಸೀಮಿತದ ಜತೆ ಒಂದು ಬಗೆಯ ಸಂವಹನ ಏರ್ಪಡಿಸಿಕೊಳ್ಳಬಹುದು; ಆದರೆ ಈ ಸಂವಹನವೂ ಸೀಮಿತ, ಸಂಕುಚಿತ ಹಾಗೂ ತುಂಡು ತುಂಡು ಎಂಬುದನ್ನು ಗಮನಿಸಬೇಕು.

ವ್ಯಕ್ತಿ ವ್ಯಾಪಾರಿ ಬುದ್ಧಿಯವನಾದರೆ, ಇದೆಲ್ಲದರ ಪ್ರಯೋಜನವೇನು ಎಂದು ಕೇಳಬಹುದು. ಅಸೀಮದ ಪ್ರಯೋಜನ ಏನು? ಇದರಿಂದ ಮನುಷ್ಯನಿಗೆ ಏನು ಲಾಭ? ನಮಗೆ ಯಾವಾಗಲೂ ಒಂದಲ್ಲ ಒಂದು ಬಹುಮಾನ ಬೇಕು. ನಾವು ಯಾವತ್ತೂ ಪುರಸ್ಕಾರ ಮತ್ತು ಶಿಕ್ಷೆಯ ತತ್ವಕ್ಕೆ ಅನುಸಾರವಾಗಿ ಬದುಕುವವರು. ಹೇಗೆಂದರೆ ಒಂದು ನಾಯಿ ನಿಮ್ಮ ಆಜ್ಞೆಯನ್ನು ಪಾಲಿಸಿದಾಗ ನೀವು ಅದಕ್ಕೆ ಬಹುಮಾನ ಕೊಡುತ್ತೀರಿ. ಈ ರೀತಿ ನಾಯಿಗೆ ಅಭ್ಯಾಸ ಮಾಡಿಸಿದ್ದೀರಿ. ನಾವು ಕೂಡಾ ಇದೇ ಮಾದರಿಯಲ್ಲಿ ನಮ್ಮ ಕ್ರಿಯೆಗಳಿಗಾಗಿ, ನಮ್ಮ ವಿಧೇಯತೆಗಾಗಿ ಪುರಸ್ಕಾರವನ್ನು ಹಂಬಲಿಸುತ್ತೇವೆ. ಸೀಮಿತ ಮಿದುಳಿನ ಘನಸ್ವರೂಪವಾಗಿ ಇಂಥ ಬೇಡಿಕೆ ಕಂಡು ಬಂದಿದೆ. ಮಿದುಳು ಚಿಂತನೆಯ ಕೇಂದ್ರ, ಚಿಂತನೆ ಎಲ್ಲ ಸಂದರ್ಭಗಳಲ್ಲೂ ಸೀಮಿತ. ಅದು ಅಸಾಧಾರಣವಾದುದನ್ನು, ಸೈದ್ಧಾಂತಿಕವಾದುದನ್ನು ಹಾಗೂ ಅಪ್ರಮೇಯವನ್ನು ಆವಿಷ್ಕರಿಸಬಲ್ಲುದು. ಆದರೆ ಅದರ ಆವಿಷ್ಕಾರಗಳು ಸದಾ ಸೀಮಿತ; ಅಲ್ಪ. ಆದುದರಿಂದಲೇ ಮನುಷ್ಯ ಈ ಎಲ್ಲ ಕ್ಷುದ್ರತೆಗಳಿಂದ ಸಂಪೂರ್ಣ ಮುಕ್ತನಾಗಬೇಕು, ಜೀವನದ ಕ್ಷುದ್ರತೆಗಳಿಂದ, ಕಷ್ಟಗಳಿಂದ, ಸ್ವ-ಕೇಂದ್ರಿತ ಚಟುವಟಿಕೆಗಳಿಂದ ಪೂರ್ತಿ ಮುಕ್ತನಾಗದೆ ಅಸೀಮವು ಗೋಚರಿಸದು.

ಯಾವುದು ಅಗಣಿತವೋ ಅದನ್ನು ಶಬ್ದಗಳಿಂದ ಅಳೆಯಲಾಗದು. ನಾವು ಅಗಣಿತವೂ ಅಪ್ರಮೇಯವೂ ಆದುದನ್ನು ಯಾವತ್ತೂ ಶಬ್ದಗಳ ಚೌಕಟ್ಟಿನಲ್ಲಿ ಸೆರೆಹಿಡಿಯಲು ಯತ್ನಿಸುತ್ತೇವೆ; ಸಂಕೇತವೇ ಯಥಾರ್ಥವಲ್ಲ. ಆದರೆ ನಾವು ಸಂಕೇತವನ್ನು ಆರಾಧಿಸುತ್ತೇವೆ; ಹೀಗಾಗಿ ಸದಾ ಮಿತವಾದ ಸ್ಥಿತಿಯಲ್ಲೇ ಬದುಕುತ್ತೇವೆ.

ಮರದ ತುದಿಗಳಲ್ಲಿ ಮೋಡಗಳು ತೂಗಾಡುತ್ತಿವೆ, ಹಕ್ಕಿಗಳು ಮೌನವಾಗಿವೆ, ಗುಡುಗು ಮಳೆಗಾಗಿ ಕಾಯುತ್ತಿದೆ, ಗಂಭೀರವಾಗಿರಲು, ಸಕಲ ಅಸ್ತಿತ್ವವನ್ನು ಪ್ರಶ್ನಿಸಲು, ದೇವರುಗಳನ್ನು ಹಾಗೂ ಮಾನವನ ಸಕಲ ಚಟುವಟಿಕೆಗಳನ್ನು ಪ್ರಶ್ನಿಸಲು ಇದೊಂದು ಸುಂದರ ಸುಪ್ರಭಾತ. ನಮ್ಮದು ನಾಲ್ಕು ದಿನದ ಬಾಳುವೆ; ಈ ಅಲ್ಪಾವಧಿಯಲ್ಲಿ ಸ್ಮೃತಿಯ ಚಲನೆಯಾಗಿರುವ ಮನಸ್ಸಿನ ಒಟ್ಟು ಕ್ಷೇತ್ರದ ಬಗ್ಗೆ ನಾವು

ಕಲಿಯುವಂಥದ್ದೇನೂ ಇಲ್ಲ; ಹೆಚ್ಚೆಂದರೆ ನಾವು ಅದನ್ನು ಅವಲೋಕಿಸಬಹುದು. ಚಿಂತನೆಯ ಚಲನೆಯಿಲ್ಲದೆ, ಕಾಲದ ಹಂಗಿಲ್ಲದೆ, ಗತಜ್ಞಾನದ ಬೆಂಬಲವಿಲ್ಲದೆ, ಭೂತದ ಸಾರರೂಪವೇ ಆಗಿರುವ ಅವಲೋಕನಕಾರನಿಲ್ಲದೆ ಕೇವಲ ಅವಲೋಕನಮಾಡಿ. ಸುಮ್ಮನೆ ನೋಡುತ್ತಿರಿ. ಆ ಮೋಡಗಳು ಬಗೆ ಬಗೆಯ ಆಕಾರ ತಳೆಯುವುದನ್ನು ಗಮನಿಸಿ; ಮರಗಿಡಗಳನ್ನು, ಪುಟ್ಟ ಹಕ್ಕಿಗಳನ್ನು ನೋಡಿ, ಇದೆಲ್ಲ ಬದುಕಿನ ಭಾಗ. ನೀವು ಗಮನವಿಟ್ಟು ಶ್ರದ್ಧೆಯಿಟ್ಟು ಗಮನಿಸಿ, ಅಲ್ಲಿ ಕಲಿಯುವಂಥದ್ದೇನೂ ಇಲ್ಲ; ಇರುವುದು ವಿಶಾಲವಾದ ಅವಕಾಶ, ಮೌನ ಹಾಗೂ ಖಾಲಿತನ - ಎಲ್ಲ ಶಕ್ತಿ ಹ್ರಾಸ?

ಕೃತಿ: "ಕೃಷ್ಣಮೂರ್ತಿ ಆತ್ಮಸಂಗಾತ, ೧೯ ಏಪ್ರಿಲ್, ೧೯೮೩"
ಅನುವಾದ: ಡಾ. ಮಹಾಬಲೇಶ್ವರ ರಾವ್
ಮೂಲ: "Krishnamurti to himself"



ಭಾರದ್ವಾಜ ಹಕ್ಕಿಗಳು ಮತ್ತು ಹದ್ದುಗಳು ಹಾರಾಟದಲ್ಲಿ ಯಾವ ಗುರುತನ್ನೂ ಉಳಿಸುವುದಿಲ್ಲ; ವಿಜ್ಞಾನಿಗಳು ವಿಶೇಷಜ್ಞರು ತಮ್ಮ ಗುರುತುಗಳನ್ನು ಬಿಟ್ಟು ಹೋಗುತ್ತಾರೆ. ನೀವು ಅವರನ್ನು ಹೆಜ್ಜೆ ಹೆಜ್ಜೆಯಲ್ಲೂ ಅನುಸರಿಸಿ ಅವರು ಈಗಾಗಲೆ ಕಂಡು ಹುಡುಕಿ ಶೇಖರಿಸಿ ಇಟ್ಟಿರುವುದಕ್ಕೆ ನೀವು ನಿಮ್ಮ ಹೆಜ್ಜೆಗಳನ್ನು ಕೂಡಿಸಬಹುದು. ಹೆಚ್ಚು ಕಡಿಮೆ ಅವರ ಸಂಗ್ರಹಣೆ ಎಲ್ಲಿಗೆ ಕೊಂಡೊಯ್ಯುತ್ತದೆ ಎಂಬುದು ನಮಗೆ ತಿಳಿದಿದೆ. ಆದರೆ ಸತ್ಯವು ಹಾಗಲ್ಲ; ಅದು ನಿಜವಾಗಿಯೂ ಹಾದಿಗಳಿಲ್ಲದ ನೆಲೆ; ಅದು ರಸ್ತೆಯ ಮುಂದಿನ ತಿರುವಿನಲ್ಲಿರಬಹುದು ಅಥವಾ ಸಾವಿರ ಮೈಲಿಗಳಾಚೆಗೂ ಇರಬಹುದು.

ಜೆ ಕೃಷ್ಣಮೂರ್ತಿ

ಹೊಸ ಪುಸ್ತಕಗಳ ಪ್ರಕಟಣೆ: 2023







ಈ ಹೊಸ ಪುಸ್ತಕಗಳು ವಸಂತ ಪ್ರಕಾಶನ ಹಾಗು ಎಲ್ಲಾ ಪ್ರಸ್ತುತ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿರುತ್ತವೆ. ತಿಂಗಳ ಮೊದಲ ಭಾನುವಾರದ ಸಂವಾದ ಸಭೆಯ ಬಳಿಕ ಶಾಲಾ ಆವರಣದಲ್ಲಿ ಹಾಗೂ ಕೃಷ್ಣಮೂರ್ತಿ ಅಧ್ಯಯನ ಕೇಂದ್ರದಲ್ಲಿ ಕೃತಿಗಳು ಲಭ್ಯವಿರುತ್ತವೆ.

ಪ್ರಸ್ತುತ ಕೃತಿಗಳು:

What are you Doing with your Life, Krishnamurti to Himself and Leaving School Entering life ಕೃತಿಗಳಿಂದ ಅನುವಾದವಾಗಿವೆ.

Published by:
Editor: Smt. Sushama Inamdar
The Study Bangalore Education Centre
Krishnamurti Foundation India
Thataguni Post, Bangalore - 560082

Contact Information:
Mob: 8317419451
Email: kfistudy@gmail.com
Website: www.kfistudy.org

ಕನ್ನಡ ಭಾಷಾಂತರ ಸಮಿತಿ ಸದಸ್ಯರು:
ಡಾ|| ಎಚ್. ಎಸ್. ರಾಘವೇಂದ್ರರಾವ್
ಪ್ರೊ|| ಓ. ಎಲ್. ನಾಗಭೂಷಣ ಸ್ವಾಮಿ
ಡಾ|| ವನಮಾಲಾ ವಿಶ್ವನಾಥ್